Leapfrog Engineering Services Limited CSR Bus Donation Event Summary:

8th September marked a remarkable day for both Leapfrog and the Shri Sode Vadiraja Mutt Education Trust (R), Udupi, as part of Leapfrog's Corporate Social Responsibility (CSR) initiative.

Leapfrog proudly donated 2 new school buses to the Shri Sode Vadiraja Mutt Education Trust (R), following a formal request made by the group's senior officer to Mr. Prabhav Rao, MD of Leapfrog.

The institution currently accommodates around 700 students, ranging from Nursery to PUC, and while 8 buses were already in operation, there was a pressing need for additional transportation facilities to ensure student safety and accessibility.

The bus handover ceremony, including the symbolic key handover, was conducted with great enthusiasm and appreciation. The school extended heartfelt thanks to Leapfrog for their generous support, recognizing the crucial role this contribution plays in supporting rural education. The handover ceremony, held on 8th September at the school campus, was a grand and heartwarming event attended by school staff, students, local public, media, and the Leapfrog Engineering services limited team.

As a mark of appreciation, the Leapfrog team was honored with a memento and a Krishna idol, symbolizing the trust's gratitude and the spirit of goodwill between the organizations.


Leapfrog Engineering Services Ltd.
leapfrog
Engineering Services
EICHER



ಸುದ್ದಿ ಸಂಚಯ

ಉದಯವಾಣಿ ಸುದಿನ

# ಸೋದೆ ಶಿಕ್ಷಣ ಸಂಸ್ಥೆಗಳಿಗೆ ಬಸ್‌ಗಳ ಕೊಡುಗೆ



**ಕಾಪು, ಸೆ. 8 :** ಇನ್ನಂಜೆಯ ಸೋದೆ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಸಮಗ್ರ ಶಿಕ್ಷಣ ವ್ಯವಸ್ಥೆಗೆ ಪೂರಕವಾಗಿ ಬೆಂಗಳೂರಿನ ಲೀಪ್ ಫ್ರಾಗ್ ಇಂಜಿನಿಯರಿಂಗ್ ಸರ್ವೀಸಸ್ ಲಿಮಿಟೆಡ್ ತನ್ನ ಸಿಎಸ್‌ಆರ್ ನಿಧಿಯಿಂದ ಕೊಡಮಾಡಿದ ಎರಡು ಬಸ್‌ಗಳನ್ನು ಸೋಮವಾರ ಹಸ್ತಾಂತರಿಸಲಾಯಿತು.

ಇನ್ನಂಜೆ ಗ್ರಾಮದಲ್ಲಿ ಸ್ವಾತಂತ್ರ್ಯ ಪೂರ್ವದ 1943ನೇ ಇಸವಿಯಿಂದಲೇ ಉಡುಪಿ ಶ್ರೀ ಸೋದೆ ವಾದಿರಾಜ ಮಠದಿಂದ ಪ್ರವರ್ತಿತವಾದ ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳು ಸ್ಥಾಪನೆಗೊಂಡಿದ್ದು ಆರಂಭದ ದಿನಗಳಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಅಸುಪಾಸಿನ ಕರ್ನಾಟಕ ಹಾಗೂ ಕೇರಳ ರಾಜ್ಯದ ವಿದ್ಯಾರ್ಥಿಗಳಿಗೆ ಸನಿವಾಸ ಶಿಕ್ಷಣದ ಮೂಲಕ ಹೆಸರುವಾಸಿಯಾಗಿತ್ತು. ಪ್ರಸ್ತುತ ಇಲ್ಲಿ ನರ್ಸರಿಯಿಂದ ಪಿಯುಸಿವರೆಗೆ 700 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಮಧ್ಯಮ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗಾಗಿ ಎಂಟು ಬಸ್‌ಗಳು ಲಭ್ಯವಿದ್ದು ಹೆಚ್ಚಿನ ಬಸ್‌ಗಳ ಅಗತ್ಯತೆಯ ಬಗ್ಗೆ ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ರಾಧಾಕೃಷ್ಣ ಎಸ್. ಐತಾಳ್ ಅವರು ತನ್ನ ವಿದ್ಯಾರ್ಥಿ ಲೀಪ್ ಫ್ರಾಗ್ ಇಂಜಿನಿಯರಿಂಗ್ ಸರ್ವೀಸಸ್ ಲಿಮಿಟೆಡ್‌ನ ಮುಖ್ಯಸ್ಥ ಪ್ರಭಾವ್ ಎನ್. ರಾವ್ ಅವರಿಗೆ ಮನವಿ ನೀಡಿದ್ದರು.

ಈ ಮನವಿಗೆ ಸ್ಪಂಧಿಸಿದ ಲೀಪ್ ಫ್ರಾಗ್ ಇಂಜಿನಿಯರಿಂಗ್ ಸರ್ವಿಸಸ್ ಲಿಮಿಟೆಡ್ ಸಂಸ್ಥೆಯ ಮುಖ್ಯಸ್ಥ ಪ್ರಭಾವ್ ಎನ್. ರಾವ್ ಅವರು ಕಂಪೆನಿಯ ಅಧಿಕಾರಿಗಳ ಜೊತೆಗೆ ಮಾತುಕತೆ ನಡೆಸಿ ಕಂಪೆನಿಯ ಸಿಎಸ್‌ಆರ್ ನಿಧಿಯ 48 ಲಕ್ಷ ರೂ. ಅನುದಾನವನ್ನು ಬಳಸಿಕೊಂಡು ಎರಡು ಬಸ್‌ಗಳನ್ನು ವಿದ್ಯಾಸಂಸ್ಥೆಗೆ ಕೊಡುಗೆಯಾಗಿ ನೀಡಿದ್ದು ಸೋಮವಾರ ಸಂಜೆ ನಡೆದ ಸರಳ ಸಮಾರಂಭದಲ್ಲಿ ಲೀಪ್ ಫ್ರಾಗ್ ಇಂಜಿನಿಯರಿಂಗ್ ಸರ್ವಿಸಸ್ ಲಿಮಿಟೆಡ್ ಸಂಸ್ಥೆಯ ಪರವಾಗಿ ಪ್ರಿಯಾ ಶೈಲಾ ಪಿ. ರಾವ್ ಅವರು ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷ ಶ್ರೀನಿವಾಸ ತಂತ್ರಿ ಮತ್ತು ಕಾರ್ಯದರ್ಶಿ ರತ್ನ ಕುಮಾರ್ ಅವರಿಗೆ ಬಸ್ಸಿನ ಕೀಲಿಕೈಗಳನ್ನು ಹಸ್ತಾಂತರಿಸಿದರು.

ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ। ರಾಧಾಕೃಷ್ಣ ಎಸ್. ಐತಾಳ್, ಪ್ರಾಂಶುಪಾಲ ಪ್ರೊ। ಡಾ. ತಿರುಮಲೇಶ್ವರ ಭಟ್, ಎಸ್.ವಿ.ಎಚ್. ಪಿಯು ಕಾಲೇಜಿನ ಪ್ರಾಂಶುಪಾಲ ರಾಜೇಂದ್ರ ಪ್ರಭು, ಪ್ರೌಢಶಾಲಾ ಮುಖ್ಯೋಪಾಧ್ಯಾಯ ನಟರಾಜ ಉಪಾಧ್ಯಾಯ, ಪ್ರಾಥಮಿಕ ಮತ್ತು ನರ್ಸರಿ ಶಾಲೆಗಳ ಮುಖ್ಯೋಪಾಧ್ಯಾಯರಾದ ಮಮತಾ, ಸುಷ್ಮಾ ಮೊದಲಾದವರು ಉಪಸ್ಥಿತರಿದ್ದರು.